# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:17–03–2021ರಂದು ಬುಧವಾರ ಪೂರ್ವಾಹ್ನ 11–00 ಘಂಟೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಪ್ರಸನ್ನಕುಮಾರ ಬ್ಲಾಕ್, ಕೇಂದ್ರೀಯ ವಿಶ್ವವಿದ್ಯಾಲಯ ಆವರಣ, ವೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಂಗಳೂರು – ಈ ಸಭಾಂಗಣದಲ್ಲಿ ನಡೆದ 2020–21ರ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| ಹಾಜರಾದ ಸದಸ್ಯರು: | | ಪದನಾಮ |
|---|---|---|
| 01. | **ಪ್ರೊ. ಬಿ.ಪಿ. ವೀರಭದ್ರಪ್ಪ**<br>ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 02. | **ಶ್ರೀಮತಿ ಉಮಾ. ಕೆ**<br>ಉಪ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ<br>ವಿಧಾನಸೌಧ, ಬೆಂಗಳೂರು. | ಸದಸ್ಯರು |
| 03. | **ಶ್ರೀ ಕೆ.ಎಲ್ . ಸುಬ್ರಮಣ್ಯ**<br>ಉಪಕಾರ್ಯದರ್ಶಿಗಳು (ಉನ್ನತ ಶಿಕ್ಷಣ)<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 04. | **ಶ್ರೀ ಗುರುರಾಜ್ ರಾವ್**<br>ನಿರ್ದೇಶಕರು<br>ಯೋಜನಾ ಇಲಾಖೆ<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 05. | **ಶ್ರೀ, ಧರ್ಮಪ್ರಸಾದ್**<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 06. | **ಪ್ರೊ. ಹೆಚ್. ಎಸ್. ಭೋಜ್ಯಾನಾಯ್ಕ**<br>ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |
| 07. | **ಪ್ರೊ. ಎಸ್.ಎಸ್. ಪಾಟೀಲ್**<br>ಕುಲಸಚಿವರು | ಸದಸ್ಯರು. |
| 08. | **ಪ್ರೊ.ಪಿ. ಕಣ್ಣನ್**<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 09. | **ಎಸ್. ರಾಮಕೃಷ್ಣ,** ಕೆ.ಎಸ್.ಎ.ಎಸ್.<br>ಹಣಕಾಸು ಅಧಿಕಾರಿಗಳು | **ಸದಸ್ಯ ಕಾರ್ಯದರ್ಶಿಗಳು** |

ಪ್ರಸ್ತಾವನೆ:

ಪ್ರಾರಂಭದಲ್ಲಿ, ಹಣಕಾಸು ಅಧಿಕಾರಿಗಳು ಕುವೆಂಪು ವಿಶ್ವವಿದ್ಯಾಲಯದ 2020-21ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಗೆ ಆಗಮಿಸಿದ ಮಾನ್ಯ ಕುಲಪತಿಗಳಿಗೆ ಮತ್ತು ಇತರೆ ಸದಸ್ಯರುಗಳಿಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ನಂತರ ಸಭೆಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸಭಾ ಕಾರ್ಯಸೂಚಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಾಯಿತು.

**2021-ಹಸ:3:01: ದಿನಾಂಕ:16-01-2021ರಂದು ನಡೆದ 2020-21ನೇ ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ.**

**ನಿರ್ಣಯ:** ದಿನಾಂಕ: 16-01-2021ರಂದು ನಡೆದ ಕುವೆಂಪು ವಿಶ್ವವಿದ್ಯಾಲಯದ 2020-21ನೇ ಸಾಲಿನ ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ದೃಢೀಕರಿಸಿತು.

**2021-ಹಸ:3:02: ದಿನಾಂಕ:16-01-2021ರಂದು ನಡೆದ 2020-21ನೇ ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.**

**ನಿರ್ಣಯ:** ದಿನಾಂಕ:16-01-2021ರಂದು ನಡೆದ ಕುವೆಂಪು ವಿಶ್ವವಿದ್ಯಾಲಯದ 2020-21ನೇ ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ಪಾಲನಾ ವರದಿಯನ್ನು ಸಭೆಯು ಅವಲೋಕಿಸಿ ಅನುಮೋದಿಸಿತು.

**2021-ಹಸ:3:03: 2021-22ನೇ ಆರ್ಥಿಕ ವರ್ಷದ ಆಯ-ವ್ಯಯ ಅಂದಾಜು ಅನುಮೋದನೆ ಕುರಿತು**

**ನಿರ್ಣಯ:** 1) 2021-22ನೇ ಸಾಲಿನ ಆರ್ಥಿಕ ವರ್ಷದ ಅಂದಾಜು ಆಯ-ವ್ಯಯವನ್ನು ಹಣಕಾಸು ಅಧಿಕಾರಿಗಳು ಸಭೆಯ ಅನುಮೋದನೆಗಾಗಿ ಮಂಡಿಸುತ್ತಾ, ಒಟ್ಟು ವಿಶ್ವವಿದ್ಯಾಲಯದ ಸ್ವೀಕೃತಿಗಳು ರೂ.12524.16 ಲಕ್ಷಗಳು ಮತ್ತು ವೆಚ್ಚಗಳು 13056.36 ಲಕ್ಷಗಳು, ರೂ.532.20 ಲಕ್ಷಗಳ ಕೊರತೆಯನ್ನು ಹಾಗೂ ಘನ ಸರ್ಕಾರವು 2021-22ನೇ ಸಾಲಿಗೆ ಎಸ್.ಸಿ.ಪಿ./ಟಿ.ಎಸ್.ಪಿ ಯೋಜನೆಯಡಿಯಲ್ಲಿ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ದೂರಶಿಕ್ಷಣ ಪ್ರವೇಶ ಪ್ರಕ್ರಿಯೆಗಳು ಸ್ಥಗಿತಗೊಂಡ ಕಾರಣ

ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಲ್ಲಿ ಸಂಪೂರ್ಣವಾಗಿ ಕೊರತೆಯಾಗಿರುತ್ತದೆ. ಇದರಿಂದಾಗಿ ಆಯ-ವ್ಯಯದಲ್ಲೂ ಕೊರತೆ ಉಂಟಾಗಿರುತ್ತದೆ ಎಂಬ ಅಂಶವನ್ನು ಸಭೆಗೆ ವಿವರಿಸಿದರು.

2) ಸಭೆಯು 2021-22ನೇ ಆಯ-ವ್ಯಯವನ್ನು ಪರಿಶೀಲಿಸಿ, ಸುದೀರ್ಘವಾಗಿ ಚರ್ಚಿಸಿತು. ಕುಲಸಚಿವರು ಮಾತನಾಡಿ, ಘನ ಸರ್ಕಾರವು ಅಭಿವೃದ್ಧಿ ಅನುದಾನವಾಗಿ ರೂ.50.00 ಲಕ್ಷಗಳನ್ನು ಮಾತ್ರ ಬಿಡುಗಡೆಗೊಳಿಸಿರುವ ಹಿನ್ನೆಲೆಯಲ್ಲಿ 2021-22ನೇ ಸಾಲಿನಲ್ಲಿ ಯಾವುದೇ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು. ಆಡಳಿತಾತ್ಮಕ ವೆಚ್ಚಗಳನ್ನು ಕಡಿತಗೊಳಿಸುವಂತೆ ಸರ್ಕಾರದ ಉಪಕಾರ್ಯದರ್ಶಿಗಳು ತಿಳಿಸಿದರು.

3) ಸಿಂಡಿಕೇಟ್ ಸದಸ್ಯರಾದ ಶ್ರೀ ಧರ್ಮಪ್ರಸಾದ್ ಇವರು ಹಣಕಾಸು ವಿಭಾಗವನ್ನು ಸಂಪೂರ್ಣವಾಗಿ ಗಣಕೀಕರಣಗೊಳಿಸುವಂತೆ ಸೂಚಿಸಿದರು. ಶ್ರೀಯುತರು ಭದ್ರತಾ ಸಿಬ್ಬಂದಿ / ಏಜೆನ್ಸಿ ವೇತನಗಳಿಗೆ 2020-21ನೇ ಸಾಲಿನಲ್ಲಿ ರೂ.900.00 ಲಕ್ಷಗಳು ವೆಚ್ಚವಾಗಿರುವುದನ್ನು ಸಭೆಯ ಗಮನಕ್ಕೆ ತಂದರು. 2021-22ನೇ ಸಾಲಿಗೆ ಮಂಡಿಸಲಾಗಿರುವ ಆಯ-ವ್ಯಯದಲ್ಲಿ ರೂ.200.00 ಲಕ್ಷಗಳನ್ನು ನಿಗದಿಗೊಳಿಸಲಾಗಿದೆ. ವಿಶ್ವವಿದ್ಯಾಲಯದ ಏಜೆನ್ಸಿ ನೌಕರರ ವೇತನಕ್ಕೆ ಕೊರತೆ ಆಗುತ್ತದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಸರ್ಕಾರದ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ – ಇವರು ಮಾತನಾಡಿ ಆದಾಯಕ್ಕಿಂತ ವೆಚ್ಚವು ಹೆಚ್ಚಾಗಿರುವುದರಿಂದ ಸಿಬ್ಬಂದಿಗಳನ್ನು ಅಗತ್ಯಕ್ಕೆ ತಕ್ಕಂತೆ ಪುನರ್ ವಿಂಗಡಣೆ ಮಾಡುವಂತೆ ಮತ್ತು ಹೆಚ್ಚುವರಿ ಸಿಬ್ಬಂದಿಗಳನ್ನು ಕಡಿತಗೊಳಿಸುವಂತೆ ತಿಳಿಸಿದರು. ಕುಲಸಚಿವರು ಮಾತನಾಡಿ, ಖಾಲಿ ಇರುವ ಹುದ್ದೆಗಳು / ಅತಿಥಿ ಉಪನ್ಯಾಸಕರಿಗೆ ವೇತನಾನುದಾನ ನೀಡುವಂತೆ ವಿಷಯವನ್ನು ಮಂಡಿಸಿದರು. ಇದಕ್ಕೆ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರು ಖಾಲಿ ಇರುವ ಹುದ್ದೆಗಳು / ಅತಿಥಿ ಉಪನ್ಯಾಸಕರ ವಿವರಗಳೊಂದಿಗೆ ಅನುದಾನ ಕೋರಿ ಸರ್ಕಾರಕ್ಕೆ ಪತ್ರ ಬರೆಯಲು ಸೂಚಿಸಿದರು. ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಭದ್ರತಾ/ ಏಜೆನ್ಸಿ ಸಿಬ್ಬಂದಿಗಳ ಗರಿಷ್ಠ ಸೇವಾ ಅವಧಿಯಂತೆ ಕ್ರಮಕೈಗೊಳ್ಳಲು ಸೂಚಿಸಿದರು. ಆಡಳಿತ್ಮಾತಕ ವೆಚ್ಚಗಳಲ್ಲಿ ರೂ.100.00 ಲಕ್ಷಗಳನ್ನು ಕಡಿತಗೊಳಿಸಿ ಮತ್ತು ದೂರಶಿಕ್ಷಣ ನಿರ್ದೇಶನಾಲಯದ ಅಂದಾಜು ಸ್ವೀಕೃತಿಗಳಲ್ಲಿ ಹೆಚ್ಚುವರಿ ಮಾಡಿಕೊಂಡು ಭದ್ರತಾ/ ಏಜೆನ್ಸಿ

ಸಿಬ್ಬಂದಿಗಳ ವೇತನಗಳಿಗೆ ರೂ.700.00 ಲಕ್ಷಗಳನ್ನು ನಿಗದಿಗೊಳಿಸುವಂತೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಕುಲಸಚಿವರು (ಪರೀಕ್ಷಾಂಗ) ಇವರು ಮಾತನಾಡಿ, ಹಾಲಿ ಇರುವ ಸಿಬ್ಬಂದಿಗಳನ್ನು ಬಳಸಿಕೊಂಡು ವಿವಿಧ ಡಿಪ್ಲೋಮಾ ಸರ್ಟಿಫಿಕೇಟ್ ಕೋರ್ಸುಗಳನ್ನು ನಡೆಸಿದಲ್ಲಿ ವಿಶ್ವವಿದ್ಯಾಲಯಕ್ಕೆ ಆದಾಯ ಸಂಪನ್ಮೂಲವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ ಎಂದು ಸಲಹೆ ನೀಡಿದರು. ಅಂತಿಮವಾಗಿ ಒಟ್ಟು ಅಂದಾಜು ಸ್ವೀಕೃತಿ ರೂ.12724.16 ಲಕ್ಷಗಳು, ಒಟ್ಟು ಅಂದಾಜು ವೆಚ್ಚಗಳು ರೂ.13456.36 ಲಕ್ಷಗಳು, ಕೊರತೆ ರೂ.732.20 ಲಕ್ಷಗಳಿಗೆ ಸಭೆಯು ಅನುಮೋದನೆ ನೀಡಿತು.

2021–ಹಸ:3:04: **2020–21ರ ಆಯವ್ಯಯದಲ್ಲಿ ಸರ್ವೀಸ್/ಭದ್ರತಾ ಸಿಬ್ಬಂದಿಗಳ ವೇತನವನ್ನು ಪಾವತಿಸಲು ಅನುದಾನವನ್ನು ಹೆಚ್ಚಿಸಿಕೊಳ್ಳುವ ಕುರಿತು.**

**ನಿರ್ಣಯ:** 2020–21ರ ಆಯವ್ಯಯದಲ್ಲಿ ಸರ್ವೀಸ್/ಭದ್ರತಾ ಸಿಬ್ಬಂದಿಗಳ ವೇತನವನ್ನು ಪಾವತಿಸುವ ಸಂಬಂಧ ಸುದೀರ್ಘವಾಗಿ ಚರ್ಚಿಸಿದ ನಂತರ, ಜ್ಞಾನಸಹ್ಯಾದ್ರಿ ಶಂಕರಘಟ್ಟ, ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಮತ್ತು ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಹಾಗೂ ಸ್ನಾತಕೋತ್ತರ ಕೇಂದ್ರ, ಕಡೂರು ಸರ್ವೀಸ್/ ಭದ್ರತಾ ಸಿಬ್ಬಂದಿಗಳ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ನೌಕರರ ವೇತನವನ್ನು ಪಾವತಿಸಲು ಕೊರತೆಯಾಗಿರುವ ಅನುದಾನವನ್ನು ದೂರಶಿಕ್ಷಣ ನಿರ್ದೇಶನಾಲಯದ ಶೀರ್ಷಿಕೆಯಿಂದ ರೂ.178.00 ಲಕ್ಷಗಳನ್ನು ಮರು ಹೊಂದಾಣಿಕೆ ಮಾಡಿಕೊಂಡು ಪಾವತಿಸಲು ಸಭೆಯು ಅನುಮೋದಿಸಿತು.

2021–ಹಸ:3:05: **ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ ಪದನಾಮದ ನಾಲ್ಕು ಹುದ್ದೆಗಳಲ್ಲಿ ಎರಡು ಹುದ್ದೆಗಳನ್ನು ಉನ್ನತೀಕರಿಸಲು ಕರಡು ಪರಿನಿಯಮವನ್ನು ಅನುಮೋದಿಸುವ ಕುರಿತು .**

**ನಿರ್ಣಯ:** ಸದರಿ ಕರಡು ಪರಿನಿಯಮವನ್ನು ಕೂಲಂಕಷವಾಗಿ ಸಭೆಯು ಪರಿಶೀಲಿಸಿತು. ಸದರಿ ಉನ್ನತೀಕರಣದ ಕರಡು ಪರಿನಿಯಮದಲ್ಲಿ System Analyst ಹುದ್ದೆಗೆ ಅವಶ್ಯಕವಾಗಿರುವ ವಿದ್ಯಾರ್ಹತೆ / ಕಾರ್ಯವ್ಯಾಪ್ತಿ ಬಗ್ಗೆ ನಮೂದಿಸಿರುವುದಿಲ್ಲವೆಂದು ಸರ್ಕಾರದ ಉಪಕಾರ್ಯದರ್ಶಿಗಳು ಆಕ್ಷೇಪಣೆ ವ್ಯಕ್ತಪಡಿಸಿದರು.

ಎರಡು ಹುದ್ದೆಗಳನ್ನು ಉನ್ನತೀಕರಣಗೊಳಿಸಿರುವುದರಿಂದ "ಎ" ಗ್ರೇಡ್ ಶ್ರೇಣಿಯ ಹುದ್ದೆಗೆ ಬರುವುದರಿಂದ ಉಂಟಾಗುವ ಹೆಚ್ಚುವರಿ ವೆಚ್ಚವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಲ್ಲಿ ಭರಿಸಲಾಗುವುದೆಂದು ತಿಳಿಸಲಾಗಿದೆ. ಆದರೆ, ಈಗಾಗಲೇ ವಿಶ್ವವಿದ್ಯಾಲಯದ ಹುದ್ದೆಗಳನ್ನು ಹೆಚ್.ಆರ್.ಎಂ.ಎಸ್. ನಲ್ಲಿ ಅಳವಡಿಸಿ ವೇತನವನ್ನು

# ಕುವೆಂಪು ವಿಶ್ವವಿದ್ಯಾಲಯ

ಹಣಕಾಸು ವಿಭಾಗ, ಜ್ಞಾನಸಹ್ಯಾದ್ರಿ, ಶತಮಾನೋತ್ಸವ ಭವನ, ಶಂಕರಘಟ್ಟ – 577 451

ಸಂಖ್ಯೆ: ಕುವಿ: ಹವಿ: ಆಸ: :2020-21 ದಿನಾಂಕ:01-10-2021

## ಸಭಾ ಸೂಚನಾ ಪತ್ರ

ಮಾನ್ಯ ಕುಲಪತಿಗಳ ಆದೇಶದ ಮೇರೆಗೆ 2021-22ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿಯ ಸಭೆಯನ್ನು ದಿನಾಂಕ:11-10-2021ರಂದು ಸೋಮವಾರ ಪೂರ್ವಾಹ್ನ 11-00 ಘಂಟೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಪ್ರಸನ್ನಕುಮಾರ ಬ್ಲಾಕ್, ಕೇಂದ್ರಿಯ ವಿಶ್ವವಿದ್ಯಾಲಯ ಆವರಣ, ಪೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಂಗಳೂರು ಈ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಬಿಡುವು ಮಾಡಿಕೊಂಡು ಈ ಸಭೆಗೆ ಹಾಜರಾಗಲು ಕೋರಿದೆ.

ಆದೇಶಾನುಸಾರ,

ಸಹಿ/-

**ಹಣಕಾಸು ಅಧಿಕಾರಿ ಹಾಗೂ ಕಾರ್ಯದರ್ಶಿ**

**ಇವರಿಗೆ :**

1. ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು, ಕುವೆಂಪು ವಿಶ್ವವಿದ್ಯಾಲಯ,ಜ್ಞಾನಸಹ್ಯಾದ್ರಿ, ಶಂಕರಘಟ್ಟ- 577 451. ಇವರ ಮಾಹಿತಿ ಮತ್ತು ಅವಗಾಹನೆಗಾಗಿ.
2. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, 2ನೇ ಮಹಡಿ, ಬೆಂಗಳೂರು – 560001.
3. ಸರ್ಕಾರದ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು – 560001.
4. ನಿರ್ದೇಶಕರು, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, 7ನೇ ಮಹಡಿ, ಬೆಂಗಳೂರು – 560001.
5. ಶ್ರೀ, ಧರ್ಮ ಪ್ರಸಾದ್ ಜಿ, ಜಿನ್ ಎನ್. ಗೋವಿಂದಪ್ಪ, ಚಾರ್ಟಡ್ ಅಕೌಂಟೆಂಟ್ , ಶ್ರೀ ಗುರುಸಿದ್ದಾರೂಢ ಕೃಪ, 4ನೇ ಕ್ರಾಸ್, ಸುಭಾಷ್ ನಗರ ಹೊಸಮನೆ, ಭದ್ರಾವತಿ, ಶಿವಮೊಗ್ಗ- 577301.
6. ಪ್ರೊ. ಹೆಚ್. ಎಸ್. ಭೋಜ್ಯಾನಾಯ್ಕ್, ಪ್ರಾಧ್ಯಾಪಕರು, ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ.
7. ಮಾನ್ಯ ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577451.
8. ಮಾನ್ಯ ಕುಲಸಚಿವರು (ಮೌಲ್ಯಮಾಪನ), ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577451.

**ಪ್ರತಿಗಳು:**

01. **ಆಪ್ತ ಸಹಾಯಕರು :** ಕುಲಪತಿಗಳು/ ಕುಲಸಚಿವರು/ ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ- 577451.

ಹಣಕಾಸು ಅಧಿಕಾರಿ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ-577 451

# ಕುವೆಂಪು ವಿಶ್ವವಿದ್ಯಾಲಯ

ಹಣಕಾಸು ವಿಭಾಗ, ಜ್ಞಾನಸಹ್ಯಾದ್ರಿ, ಶತಮಾನೋತ್ಸವ ಭವನ, ಶಂಕರಘಟ್ಟ – 577 451

ಸಂಖ್ಯೆ: ಕುವಿ: ಹವಿ: ಆಸ: :2021-22 ದಿನಾಂಕ:01-10-2021

## 2021-22ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆ

## ಕಾರ್ಯಸೂಚಿ

ದಿನಾಂಕ : 11-10-2021
ಸಮಯ : ಪೂರ್ವಾಹ್ನ 11.00 ಗಂಟೆಗೆ

ಸ್ಥಳ : ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಭಾಂಗಣ, ಬೆಂಗಳೂರು

| ವಿಷಯ ಸಂಖ್ಯೆ. | ವಿಷಯಗಳ ವಿವರ | ಪುಟ ಸಂಖ್ಯೆ |
|---|---|---|
| | **ಹಣಕಾಸು ವಿಭಾಗ** | |
| 2021-ಹಸ:1:01 | ದಿನಾಂಕ:17-03-2021ರಂದು ನಡೆದ 2020-21ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ. | 1-6 |
| 2021-ಹಸ:1:02 | ದಿನಾಂಕ:17-03-2021ರಂದು ನಡೆದ 2020-21ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ. | 7-10 |
| 2021-ಹಸ:1:03 | 2020-21ನೇ ಆರ್ಥಿಕ ವರ್ಷದ ಸ್ವೀಕೃತಿ ಮತ್ತು ವೆಚ್ಚಗಳ ಅವಲೋಕನ ಹಾಗೂ ಅನುಮೋದನೆ ಕುರಿತು. | 11-11 |
| 2021-ಹಸ:1:04 | 2020-21ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳ ಅವಲೋಕನ ಹಾಗೂ ಅನುಮೋದನೆ ಕುರಿತು. | 12-12 |
| | **ದೂರಶಿಕ್ಷಣ ನಿರ್ದೇಶನಾಲಯ** | |
| 2021-ಹಸ:1:05 | ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸುವ ಕುರಿತು. | 13-13 |
| | **ದಾಸ್ತಾನು ಮತ್ತು ಖರೀದಿ ವಿಭಾಗ** | |
| 2021-ಹಸ:1:06 | ಮಾನ್ಯ ಕುಲಪತಿಗಳಿಗೆ ಹಾಗೂ ಕುಲಸಚಿವರು(ಪರೀಕ್ಷಾಂಗ) ಇವರುಗಳಿಗೆ ಹೊಸ ವಾಹನವನ್ನು ಖರೀದಿಸುವ ಕುರಿತು. | 14-14 |
| 2021-ಹಸ:1:07 | ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು. | |

ಆದೇಶಾನುಸಾರ,

ಹಣಕಾಸು ಅಧಿಕಾರಿ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ-577 451

ಸೆಳೆಯುತ್ತಿರುವ ಕಾರಣ ಹೆಚ್ಚುವರಿ ವೆಚ್ಚಕ್ಕೆ ಪರಿನಿಯಮಗಳ ಸಂಖ್ಯೆ:೦5ರಲ್ಲಿ ನೀಡಲಾಗಿರುವ ಸಮರ್ಥನೆಯು ಸಮರ್ಥನೀಯವಾಗಿರುವುದಿಲ್ಲವೆಂದು ಸರ್ಕಾರದ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ – ಇವರು ತಿಳಿಸಿದರು.

ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಮಂಜೂರಾಗುವ ಹುದ್ದೆಗಳಿಗೆ ವೇತನ ಭತ್ಯೆ ಸಿಂಚಣಿ ಸಹಾಯಾನುದಾನವನ್ನು ಪಡೆಯುತ್ತಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯವು ಯಾವುದೇ ಹುದ್ದೆಗಳನ್ನು ಸೃಜಿಸುವ/ ರದ್ದುಪಡಿಸುವ ಅಥವಾ ಉನ್ನತೀಕರಣಗೊಳಿಸುವ ಅಧಿಕಾರವ್ಯಾಪ್ತಿಗೆ ಬರುವುದಿಲ್ಲವೆಂದು ಸರ್ಕಾರದ ಪ್ರತಿನಿಧಿಗಳು ಸಭೆಯ ಗಮನಕ್ಕೆ ತಂದರು.

ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಸರ್ಕಾರದ ಅನುಮೋದನೆಯನ್ನು ಪಡೆದು ತದನಂತರ ಕರಡು ಪರಿನಿಯಮಗಳನ್ನು ಸಿದ್ಧಪಡಿಸಿ ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆಯನ್ನು ಪಡೆದು ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕೆ ಸರ್ಕಾರಕ್ಕೆ ಸಲ್ಲಿಸಲು ಹಾಗೂ ಅಂಕಿತಗೊಂಡ ದಿನಾಂಕದಿಂದ ಕಾರ್ಯರೂಪಕ್ಕೆ ತರಬೇಕೆಂದು ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರು ಸಭೆಗೆ ತಿಳಿಸಿದರು. ಅದರಂತೆ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ನಿರ್ಣಯಿಸಿತು.

**2021–ಹಸ:3:06:** **2020–21ನೇ ಹಣಕಾಸು ವರ್ಷದ ಆಯ–ವ್ಯಯದ ಪುನರ್ ಧನ ವಿನಿಯೋಗ (ಮರು ಹೊಂದಾಣಿಕೆ) ಮತ್ತು ಪೂರಕ ಅನುದಾನ ಕುರಿತು.**

**ನಿರ್ಣಯ:** 2020–21ನೇ ಹಣಕಾಸು ವರ್ಷದ ಆಯ–ವ್ಯಯದಲ್ಲಿ ಕೊರತೆಯಾಗಿರುವ ಅನುದಾನವನ್ನು **ಜ್ಞಾನಸಹ್ಯಾದ್ರಿ ಶೀರ್ಷಿಕೆಗಳಿಗೆ ಹಾಗೂ ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ ಕಾಲೇಜಿನ ಶೀರ್ಷಿಕೆಗಳಿಗೆ** ಒಟ್ಟಾರೆ **ರೂ.3,85,000/– (ಮೂರು ಲಕ್ಷದ ಎಂಬತ್ತೈದು ಸಾವಿರ ರೂಪಾಯಿಗಳು ಮಾತ್ರ)**ಗಳನ್ನು ಪ್ರಪತ್ರ–22ಎ (ಅನುಚ್ಛೇದ–308, ಕೆ.ಎಫ್.ಸಿ)ರ ಪ್ರಕಾರದಂತೆ ಪುನರ್ ಧನವಿನಿಯೋಗ ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು.

**2021–ಹಸ:3:07:** **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು :**

1) **ವಿಶ್ವವಿದ್ಯಾಲಯದಲ್ಲಿ** IBM Centre of Excellence in Data Science & Cyber Security **ಘಟಕವನ್ನು ಸ್ಥಾಪಿಸುವ ಕುರಿತು.**

**ನಿರ್ಣಯ:** ಸರ್ಕಾರದ ಅಂಗ ಸಂಸ್ಥೆಯಾದ ಕರ್ನಾಟಕ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (KEONICS), ಬೆಂಗಳೂರು ಇವರು ವಿಶ್ವವಿದ್ಯಾಲಯದ ಆವರಣದಲ್ಲಿ IBM Centre of Excellence in Data Science & Cyber Security ಘಟಕವನ್ನು ಸ್ಥಾಪಿಸಲು

ಉದ್ದೇಶಿಸಿರುವುದನ್ನು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. ಸದರಿ ಘಟಕವನ್ನು ಸ್ಥಾಪಿಸಲು ರೂ.230.00 ಲಕ್ಷಗಳು ವೆಚ್ಚವಾಗುತ್ತದೆ. ಹಾಗೂ 10%ಮೊತ್ತವನ್ನು ಸದರಿ ಕೇಂದ್ರದ ಸ್ಥಾಪನೆ. ಸಾಫ್ಟ್‌ವೇರ್ ಇನ್‌ಸ್ಟಾಲೇಶನ್ ಮತ್ತು ತರಬೇತಿ ಕಾರ್ಯಕ್ಕೆ ನೀಡುವುದು ಹಾಗೂ ಉಳಿದ ಮೊತ್ತದ 90% ಬಾಕಿ ಮೊತ್ತವನ್ನು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಅನುದಾನ ಬಂದ ನಂತರ ಪಾವತಿಗೆ ಕ್ರಮಕೈಗೊಳ್ಳಲಾಗುವುದು ಎಂದು ಮಾನ್ಯ ಕುಲಪತಿಗಳು ವಿಷಯವನ್ನು ವಿವರಿಸಿದರು. ಸಭೆಯು ಸುಧೀರ್ಘವಾಗಿ ಚರ್ಚಿಸಿ ನಂತರ ಘನ ಸರ್ಕಾರದಿಂದ ಅನುದಾನ ಬಂದ ನಂತರ ಸಭೆಗೆ ಮಾಹಿತಿಯನ್ನು ನೀಡಿ ಸಂಬಂಧಿಸಿದ ಪ್ರಾಧಿಕಾರಗಳ ಅನುಮೋದನೆಯನ್ನು ಪಡೆದು ಅನುಷ್ಠಾನಗೊಳಿಸಲು ಸಭೆಯು ಸೂಚಿಸಿತು.

ಅಂತಿಮವಾಗಿ, ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಗಳು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು.

( ಎಸ್. ರಾಮಕೃಷ್ಣ, ಕೆ.ಎಸ್.ಎ.ಎಸ್.)
ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು

ಸಹಿ/-

(ಪ್ರೊ. ಬಿ.ಪಿ. ವೀರಭದ್ರಪ್ಪ)
ಕುಲಪತಿಗಳು ಹಾಗೂ ಅಧ್ಯಕ್ಷರು

2 : 01

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:11-10-2021ರಂದು ,ಸೋಮವಾರ ಪೂರ್ವಾಹ್ನ 11-00 ಘಂಟೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಪ್ರಸನ್ನಕುಮಾರ ಬ್ಲಾಕ್, ಕೇಂದ್ರೀಯ ವಿಶ್ವವಿದ್ಯಾಲಯ ಆವರಣ, ವೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಂಗಳೂರು - ಈ ಸಭಾಂಗಣದಲ್ಲಿ ನಡೆದ 2021-22ರ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| ಹಾಜರಾದ ಸದಸ್ಯರು: | | ಪದನಾಮ |
|---|---|---|
| 01. | **ಪ್ರೊ. ಬಿ.ಪಿ. ವೀರಭದ್ರಪ್ಪ**<br>ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 02. | **ಶ್ರೀಮತಿ ಉಮಾ. ಕೆ**<br>ಉಪ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ<br>ವಿಧಾನಸೌಧ, ಬೆಂಗಳೂರು | ಸದಸ್ಯರು |
| 03. | **ಶ್ರೀ ಕೆ.ಎಲ್ . ಸುಬ್ರಮಣ್ಯ**<br>ಜಂಟಿ ಕಾರ್ಯದರ್ಶಿಗಳು (ಉನ್ನತ ಶಿಕ್ಷಣ)<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 04. | **ಶ್ರೀ ಗುರುರಾಜ್ ರಾವ್**<br>ನಿರ್ದೇಶಕರು<br>ಯೋಜನಾ ಇಲಾಖೆ<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 06. | **ಪ್ರೊ. ಹೆಚ್. ಎಸ್. ಭೋಜ್ಯಾನಾಯ್ಕ**<br>ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |
| 07. | **ಶ್ರೀಮತಿ. ಅನುರಾಧ.ಜಿ.** ಕೆ.ಎ.ಎಸ್<br>ಕುಲಸಚಿವರು | ಸದಸ್ಯರು. |
| 08. | **ಪ್ರೊ. ಸಿ. ಎಂ. ತ್ಯಾಗರಾಜ್**<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 09. | **ಎಸ್. ರಾಮಕೃಷ್ಣ.** ಕೆ.ಎಸ್.ಎ.ಎಸ್.<br>ಹಣಕಾಸು ಅಧಿಕಾರಿಗಳು | **ಸದಸ್ಯ ಕಾರ್ಯದರ್ಶಿಗಳು** |

**ಗೈರು ಹಾಜರಾದವರು**

| | | |
|---|---|---|
| 01. | **ಶ್ರೀ. ಧರ್ಮಪ್ರಸಾದ್**<br>ಸಿಂಡಿಕೇಟ್ ಸದಸ್ಯರು | ಸದಸ್ಯರು |

ಪ್ರಸ್ತಾವನೆ:

ಪ್ರಾರಂಭದಲ್ಲಿ, ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಗೆ ಆಗಮಿಸಿದ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಆತ್ಮೀಯವಾಗಿ ಸ್ವಾಗತ ಕೋರಿದರು. ನಂತರ ನೂತನ ಕುಲಸಚಿವರಾದ ಶ್ರೀಮತಿ, ಅನುರಾಧ.ಜಿ.,ಕೆ.ಎ.ಎಸ್ ಇವರನ್ನು ಮಾನ್ಯ ಕುಲಪತಿಗಳು ಸಭೆಗೆ ಪರಿಚಯಿಸಿದರು.

ಸಭೆಯ ಅಧ್ಯಕ್ಷರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ವಿಶ್ವವಿದ್ಯಾಲಯಕ್ಕೆ ಅತಿಥಿ ಉಪನ್ಯಾಸಕರು / ಸಕ್ಯೂರಿಟಿ / ಸೇವಾ ನೌಕರರ ವೇತನಗಳನ್ನು ಪಾವತಿಸಲು ಕಷ್ಟಸಾಧ್ಯವಾಗಿದೆ. ಅಲ್ಲದೇ ಮುಂದುವರೆದ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿವೆ. ಈ ಹಿನ್ನೆಲೆಯಲ್ಲಿ ಸರ್ಕಾರವು ವಿಶ್ವವಿದ್ಯಾಲಯದಿಂದ ಸಲ್ಲಿಸಿರುವ ಪ್ರಸ್ತಾವನೆಗಳನ್ನು ಪರಿಗಣಿಸಬೇಕೆಂದು ಕೋರಿದರು.. ನಂತರ ಸಭಾ ಕಾರ್ಯಸೂಚಿಯಂತೆ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

| | |
|---|---|
| **2021-ಹಸ:1:01:** | **ದಿನಾಂಕ:17-03-2021ರಂದು ನಡೆದ 2021-22ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ.** |
| **ನಿರ್ಣಯ:** | ದಿನಾಂಕ: 17-03-2021ರಂದು ನಡೆದ ಕುವೆಂಪು ವಿಶ್ವವಿದ್ಯಾಲಯದ 2021-22ನೇ ಸಾಲಿನ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ದೃಢೀಕರಿಸಿತು. |
| **2021-ಹಸ:1:02:** | **ದಿನಾಂಕ:17-03-2021ರಂದು ನಡೆದ 2021-22ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.** |
| **ನಿರ್ಣಯ:** | ದಿನಾಂಕ:17-03-2021ರಂದು ನಡೆದ ಕುವೆಂಪು ವಿಶ್ವವಿದ್ಯಾಲಯದ 2021-22ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು. |
| **2021-ಹಸ:1:03:** | **2020-21ನೇ ಆರ್ಥಿಕ ವರ್ಷದ ಸ್ವೀಕೃತಿ ಮತ್ತು ವೆಚ್ಚಗಳ ಅವಲೋಕನ ಹಾಗೂ ಅನುಮೋದನೆ ಕುರಿತು.** |
| **ನಿರ್ಣಯ:** | 1) 2020-21ನೇ ಸಾಲಿನ ಆರ್ಥಿಕ ವರ್ಷದ ವರ್ಷದ ಸ್ವೀಕೃತಿ ಮತ್ತು ವೆಚ್ಚಗಳನ್ನು ಹಣಕಾಸು ಅಧಿಕಾರಿಗಳು ಸಭೆಯ ಅನುಮೋದನೆಗಾಗಿ ಮಂಡಿಸಿದರು. ನಂತರ ಸಭೆಯು ಕೂಲಂಕೂಷವಾಗಿ ಪರಿಶೀಲಿಸಿ ಅನುಮೋದಿಸಲಾಯಿತು. |

| | |
|---|---|
| 2021-ಹಸ:೧:04: | 2020-21ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳ ಅವಲೋಕನ ಹಾಗೂ ಅನುಮೋದನೆ ಕುರಿತು. |
| ನಿರ್ಣಯ: | 2020-21ರ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿ ಈ ಕೆಳಗಿನಂತೆ ಅನುಮೋದಿಸಲಾಯಿತು. |

| Particulars | Cash | TDR |
|---|---|---|
| Opening Balance | 80,09,26,733 | 56,29,92,110 |
| Total Receipts | 1,13,32,85,244 | 2,41,36,699 |
| Total Expenditure | 1,33,13,84,509 | 2,03,01,130 |
| Closing Balance | 60,28,27,468 | 56,68,27,679 |

2021-22ನೇ ಸಾಲಿನಲ್ಲಿ ಆಡಳಿತಾತ್ಮಕ ವೆಚ್ಚಗಳನ್ನು ಕಡಿತಗೊಳಿಸಿ ಶೈಕ್ಷಣಿಕ ವೆಚ್ಚಗಳನ್ನು ಸಂಪೂರ್ಣವಾಗಿ ಭರಿಸುವಂತೆ ವಿದ್ಯಾವಿಷಯಕ ಸದಸ್ಯರಾದ. ಪ್ರೊ. ಹೆಚ್. ಎಸ್. ಭೋಜ್ಯಾನಾಯ್ಕರವರು ಸಭೆಗೆ ತಿಳಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರವೇಶ ಪಡೆದ ಸಂಶೋಧನಾರ್ಥಿಗಳಿಗೆ ಶೀಘ್ರವಾಗಿ ವಿದ್ಯಾರ್ಥಿವೇತನವನ್ನು ಪಾವತಿಸುವ ಸಂಬಂಧ ಕ್ರಮಕೈಗೊಳ್ಳುವಂತೆ ಹಾಗೂ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಹರಿಜನ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಅನುದಾನ ಬಿಡುಗಡೆಗೆ ಕ್ರಮಕೈಗೊಳ್ಳಲು ಸೂಚಿಸಿದರು. ಸಭೆಯು ಸುಧೀರ್ಘವಾಗಿ ಚರ್ಚಿಸಿ ಸದರಿ ವಿಷಯವನ್ನು ಅನುಮೋದಿಸಿತು.

ಹಣಕಾಸು ಅಧಿಕಾರಿಗಳು ಮಾತನಾಡಿ ನಿರ್ದೇಶಕರು, ದೂರ ಶಿಕ್ಷಣ ನಿರ್ದೇಶನಾಲಯ ಇವರ ಹೆಸರಿನಲ್ಲಿರುವ ಖಾತೆಯಿಂದ 91.00ಲಕ್ಷಗಳ ಮೊತ್ತವನ್ನು ಹಣಕಾಸು ಅಧಿಕಾರಿಗಳ ಖಾತೆಗೆ ವರ್ಗಾವಣೆಯನ್ನು ಮಾಡಿರುತ್ತಾರೆ ಎಂದು ಸಭೆಗೆ ತಿಳಿಸಿದರು. ಸಭೆಯು ಸದರಿ ವಿಷಯವನ್ನು ಸುಧೀರ್ಘವಾಗಿ ಚರ್ಚಿಸಿತು. ಉಪಕಾರ್ಯದರ್ಶಿಗಳು ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ಇವರು ಮಾತನಾಡಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 46(ಡಿ) ಮತ್ತು (ಜಿ)ರಂತೆ ಎಲ್ಲಾ ನಿಧಿಗಳು ಹಣಕಾಸು ಅಧಿಕಾರಿಗಳ ಖಾತೆಯಲ್ಲಿ ನಿರ್ವಹಿಸಬೇಕಾಗಿರುತ್ತದೆ. ಆದುದರಿಂದ ಸದರಿ ಮೊತ್ತವನ್ನು ಯಾವ ಬಾಬ್ತು

ಎಂಬುದನ್ನು ಪರಿಶೀಲಿಸಿ ಕ್ರಮಕೈಗೊಳ್ಳುವಂತೆ ಸಭೆಗೆ ತಿಳಿಸಿದರು. ನಂತರ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ. ಪ್ರೊ. ಹೆಚ್. ಎಸ್. ಭೋಜ್ಯಾನಾಯ್ಕ್‌ರವರು ಮಾತನಾಡಿ ಸದರಿ ಮೊತ್ತವು ವಿವಿಧ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿ ವೇತನಕ್ಕಾಗಿ ಜಮೆ ಆಗಿರುತ್ತದೆ ಎಂಬ ಮಾಹಿತಿಯನ್ನು ಸಭೆಗೆ ನೀಡಿದರು. ನಂತರ ನಿರ್ದೇಶಕರು, ಯೋಜನಾ ಇಲಾಖೆ, ಕರ್ನಾಟಕ ಸರ್ಕಾರ ಇವರು ಸದರಿ ಮೊತ್ತವನ್ನು ಪರಿಶೀಲಿಸಿ ಬಡ್ಡಿ ಸಹಿತ ಸಂಬಂಧಿಸಿದ ಇಲಾಖೆಗೆ ಹಣಕಾಸು ಅಧಿಕಾರಿಗಳು ಶೀಘ್ರವಾಗಿ ಜಮೆ ಮಾಡಿ ಮುಂದೆ ನಡೆಯುವ ಹಣಕಾಸು ಸಮಿತಿ ಸಭೆಗೆ ಮಾಹಿತಿಯನ್ನು ಸಲ್ಲಿಸುವಂತೆ ತಿಳಿಸಿದರು.

ಕುವೆಂಪು ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಪ್ರಾರಂಭಗೊಂಡ ವಿಭಾಗಗಳಿಗೆ ತಯಾರಿಸಲಾಗಿರುವ ಪರಿನಿಯಮಗಳನ್ನು ಸರ್ಕಾರವು ವಿಶ್ವವಿದ್ಯಾಲಯಕ್ಕೆ ಆಕ್ಷೇಪಣೆಯೊಂದಿಗೆ ಹಿಂದಿರುಗಿಸಲಾಗಿದೆ. ಇವುಗಳನ್ನು ಶೀಘ್ರವಾಗಿ ಎಲ್ಲಾ ಆಕ್ಷೇಪಣೆಗಳನ್ನು ಸರಿಪಡಿಸಿ ಪ್ರಾಧಿಕಾರಗಳ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ಇವರು ತಿಳಿಸಿದರು.

ಖಾಲಿ ಇರುವ ಹುದ್ದೆಗಳಿಗೆ ಭರ್ತಿ ಮಾಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸಭೆಯು ತೀರ್ಮಾನಿಸಿತು.

ಖಾಲಿ ಇರುವ ಹುದ್ದೆಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸುವ ಸಂದರ್ಭದಲ್ಲಿ ನಿಖರವಾದ ಅಂಕಿ ಅಂಶಗಳ ಸಮರ್ಥನೆಯ ಪ್ರಸ್ತಾವನೆಯನ್ನು (ಉದಾ: ವಿದ್ಯಾರ್ಥಿಗಳ ಅಂಕಿ ಅಂಶಗಳು, ವಿಭಾಗದ ಪ್ರಾರಂಭ ಹಾಲಿ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ವಿವರ ಕಾರ್ಯಭಾರ ಇತರೆ) ಸಲ್ಲಿಸುವಂತೆ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರು ತಿಳಿಸಿದರು.

ಪ್ರೊ. ಹೆಚ್. ಎಸ್. ಭೋಜ್ಯಾನಾಯ್ಕ ಇವರು ಮಾತನಾಡುತ್ತಾ, 2020-21ನೇ ಸಾಲಿನ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕಿಯೋನಿಕ್ಸ್ ಸಂಸ್ಥೆಯಿಂದ ಖರೀದಿಸಲಾದ ಆನ್ ಲೈನ್ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈಗಾಗಲೇ ಎಷ್ಟು ಮೊತ್ತವನ್ನು ಪಾವತಿಸಲಾಗಿದೆ ಎಂಬ ವಿವರವನ್ನು ಕೇಳಿದರು. ನಂತರ ಹಣಕಾಸು ಅಧಿಕಾರಿಗಳು ಈ ಸಂಬಂಧ ಯಾವುದೇ ಬಿಲ್ ಪಾವತಿಯಾಗಿರುವುದಿಲ್ಲ ಎಂದು

| | |
|---|---|
| | ಸಭೆಯ ಗಮನಕ್ಕೆ ತಂದರು. ಪ್ರೊ. ಹೆಚ್. ಎಸ್. ಭೋಜ್ಯಾನಾಯ್ಕ್ ಇವರು ಮಾತನಾಡಿ, ಈ ತಂತ್ರಾಂಶವು ಸಂಪೂರ್ಣವಾಗಿ ಯಶಸ್ವಿಯಾಗಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಮಾನ್ಯ ಕುಲಪತಿಗಳು ಮಾತನಾಡುತ್ತಾ, ಸದರಿ ತಂತ್ರಾಂಶವು ಯಶಸ್ವಿಯಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ವಿವಿಧ ವಿಭಾಗಗಳಿಂದ ದೃಢೀಕರಣ ಪ್ರಮಾಣ ಪತ್ರವನ್ನು ಪಡೆದುಕೊಂಡು ನಂತರ ಪಾವತಿಸಲು ಸಭೆಯು ತೀರ್ಮಾನಿಸಿತು. |
| 2021-ಹಸ:1:05: | **ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸುವ ಕುರಿತು.** |
| ನಿರ್ಣಯ: | ದೂರ ಶಿಕ್ಷಣ ನಿದೇಶನಾಲಯಕ್ಕೆ ಅಧ್ಯಯನ ಸಾಮಾಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಲು ಹೊಸ ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೆ ಹಳೆ ಟೆಂಡರ್‌ನ್ನು ಮುಂದುವರಿಸುವ ಕುರಿತು. ಹಾಗೂ ಪ್ರಸ್ತುತ ಅಗತ್ಯವಿರುವ ಅಧ್ಯಯನ ಸಾಮಾಗ್ರಿಗಳನ್ನು ಮುದ್ರಿಸಿ ಸರಬರಾಜು ಆದೇಶ ನೀಡಿರುವ ಕುರಿತು ಚರ್ಚಿಸಲಾಯಿತು. ಸುಧೀರ್ಘ ಚರ್ಚೆಯ ನಂತರ , ಪ್ರವೇಶಾತಿ ವಿವರಗಳು ಮತ್ತು ಅಧ್ಯಯನ ಸಾಮಾಗ್ರಿಗಳ ಅಗತ್ಯತೆಯ ಕುರಿತು ಪರಿಶೀಲಿಸಿ ವರದಿ ನೀಡಲು ಈ ಕೆಳಕಂಡಂತೆ ಸಮಿತಿಯನ್ನು ರಚಿಸಿಕೊಂಡು ಪರಿಶೀಲಿಸಿ ಅಗತ್ಯ ಅನುಸಾರವಾಗಿ ಖರೀದಿಸಿ ಕ್ರಮಕೈಗೊಳ್ಳಲು ಸಭೆಯು ಸೂಚಿಸಿತು.<br>ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ಕುಲಸಚಿವರು(ಪ), ನಿರ್ದೇಶಕರು, ದೂ. ಶಿ.ನಿ., ಹಣಕಾಸು ಅಧಿಕಾರಿಗಳು ಮತ್ತು ಹಣಕಾಸು ಸಮಿತಿ ಸದಸ್ಯರಾದ ಪ್ರೊ. ಹೆಚ್. ಎಸ್. ಭೋಜ್ಯಾನಾಯ್ಕ್ ಇವರುಗಳನ್ನು ಒಳಗೊಂಡ ಸಮಿತಿಯನ್ನು ರಚಿಸಿಕೊಂಡು ಪರಿಶೀಲಿಸಿ ಅಗತ್ಯತೆಗೆ ಅನುಸಾರವಾಗಿ ಖರೀದಿಸಿ ಕ್ರಮಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| 2021-ಹಸ:1:06: | **ಶಾಸನಬದ್ಧ ಅಧಿಕಾರಿಗಳ ಉಪಯೋಗಕ್ಕಾಗಿ ಹೊಸ ವಾಹನಗಳ ಖರೀದಿ ಕುರಿತು.** |
| ನಿರ್ಣಯ: | ಶಾಸನಬದ್ಧ ಅಧಿಕಾರಿಗಳಿಗೆ ನಾಲ್ಕು ಹೊಸ ವಾಹನಗಳನ್ನು ಖರೀದಿಸಲು ಮಾನ್ಯ ಕುಲಸಚಿವರು ಸಭೆಯ ಅನುಮತಿ ಕೋರಿದರು. ಸಭೆಯು ಸುಧೀರ್ಘವಾಗಿ ಚರ್ಚಿಸಿದ ನಂತರ ಒಟ್ಟು ಎರಡು ಹೊಸ ವಾಹನಗಳಿಗೆ ಘನ ಸರ್ಕಾರದ ಅನುಮೋದನೆ ಪಡೆದ ನಂತರವೇ ಪ್ರಕ್ರಿಯೆ ಕ್ರಮಕೈಗೊಳ್ಳಲು ಸಭೆಯು ಸೂಚಿಸಿತು. |

| | |
|---|---|
| 2021-ಹಸ:1:06:ಎ | ವಿಶ್ವವಿದ್ಯಾಲಯದ ಕ್ಯಾಂಪಸ್ ನೆಟ್ ವರ್ಕ್‌ನ ಸುರಕ್ಷತೆಗಾಗಿ **SOPHOS UTM Firewall Software License** ನವೀಕರಣ ಮತ್ತು **Firewall** ಪರಿಕರದ **AMC** ನವಿಕರೀಸುವ ಸಂಬಂಧ ಅನುಮೋದನೆಗಾಗಿ . |
| ನಿರ್ಣಯ | ಅಧ್ಯಕ್ಷರ ಅಪ್ಪಣೆ ಮೇರೆಗೆ ಸದರಿ ವಿಷಯವನ್ನು ಹಿಂಪಡೆಯಲಾಯಿತು. |
| 2021-ಹಸ:1:06.ಬಿ | ಸ್ನಾತಕೋತ್ತರ ಅಧ್ಯಾಪಕರುಗಳಿಗೆ ಸ್ಥಳಿಯ ಭತ್ಯೆ ಮತ್ತು ಅಧ್ಯಯನ ಮಂಡಳಿಗಳ ಸಭೆಗಳಲ್ಲಿ ಭಾಗವಹಿಸುವ ಆಂತರಿಕ ಸದಸ್ಯರುಗಳಿಗೆ ಉಪಸ್ಥಿತಿ ಭತ್ಯೆ/ ಪ್ರಯಾಣ ಭತ್ಯೆ ಪ್ರತಿ ಕಿಲೋ ಮೀಟರ್ ದರಗಳ ಕುರಿತು. |
| ನಿರ್ಣಯ: | ಸದರಿ ವಿಷಯವನ್ನು ಸಿಂಡಿಕೇಟ್ ಸಭೆಗೆ ಮಂಡಿಸಿ ಅನುಮೋದನೆಯನ್ನು ಪಡೆಯಲು ಸೂಚಿಸಿತು. |
| 2021-ಹಸ:3:07: | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು :** |

ಅಂತಿಮವಾಗಿ, ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಗಳು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು.

| | |
|---|---|
| 28/10/21<br>( ಎಸ್. ರಾಮಕೃಷ್ಣ, ಕೆ.ಎಸ್.ಎ.ಎಸ್.)<br>ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು | ಸಹಿ/-<br>(ಪ್ರೊ. ಬಿ.ಪಿ. ವೀರಭದ್ರಪ್ಪ)<br>ಕುಲಪತಿಗಳು ಹಾಗೂ ಅಧ್ಯಕ್ಷರು |

# ಕುವೆಂಪು ವಿಶ್ವವಿದ್ಯಾಲಯ

ಹಣಕಾಸು ವಿಭಾಗ, ಜ್ಞಾನಸಹ್ಯಾದ್ರಿ, ಶತಮಾನೋತ್ಸವ ಭವನ, ಶಂಕರಘಟ್ಟ – 577 451

ಸಂಖ್ಯೆ: ಕುವಿ: ಹವಿ: ಆಸ: :2021-22 ದಿನಾಂಕ:16-03-2022

## 2021-22ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆ

## ಕಾರ್ಯಸೂಚಿ

ದಿನಾಂಕ : 22-03-2022
ಸಮಯ : ಅಪರಾಹ್ನ 4.30 ಗಂಟೆಗೆ

ಸ್ಥಳ : ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಭಾಂಗಣ, ಬೆಂಗಳೂರು

| ವಿಷಯ ಸಂಖ್ಯೆ. | ವಿಷಯಗಳ ವಿವರ |
|---|---|
| | ಹಣಕಾಸು ವಿಭಾಗ |
| 2021-ಹಸ:3:01 | ದಿನಾಂಕ:30-12-2021ರಂದು ನಡೆದ 2021-22ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ. |
| 2021-ಹಸ:3:02 | ದಿನಾಂಕ:30-12-2021ರಂದು ನಡೆದ 2021-22ನೇ ಹಣಕಾಸು ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ. |
| 2021-ಹಸ:3:03 | 2022-23ನೇ ಆರ್ಥಿಕ ವರ್ಷದ ಆಯ-ವ್ಯಯ ಅಂದಾಜು ಅನುಮೋದನೆ ಕುರಿತು. |
| 2021-ಹಸ:3:04 | 2021-22ನೇ ಸಾಲಿನ ಪರೀಕ್ಷಾ ವೆಚ್ಚಗಳಿಗಾಗಿ ಅನುದಾನ ಹೆಚ್ಚಿಸುವ ಕುರಿತು. |
| 2021-ಹಸ:3:05 | 2021-22ನೇ ಹಣಕಾಸು ವರ್ಷದ ಆಯ-ವ್ಯಯದ ಪುನರ್ ಧನವಿನಿಯೋಗ (ಮರುಹೊಂದಾಣಿಕೆ) ಮತ್ತು ಪೂರಕ ಅನುದಾನ ಕುರಿತು. |
| 2021-ಹಸ:3:06 | ಪರಿಷ್ಕೃತ ಪಿ. ಹೆಚ್. ಡಿ. ನಿಯಮಾವಳಿ2017ಕ್ಕೆ ಸಂಬಂಧಿಸಿದಂತೆ ಮಾರ್ಪಾಡು ಸೇರ್ಪಡೆಗೊಂಡಿರುವ ಅಂಶಗಳ ಅನುಮೋದನೆ ಕುರಿತು. |
| 2021-ಹಸ:3:07 | ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು. |

ಆದೇಶಾನುಸಾರ,

ಹಣಕಾಸು ಅಧಿಕಾರಿ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ-577 451

ಅನುಬಂಧ-1

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:30-12-2021ರಂದು ಶುಕ್ರವಾರ ಪೂರ್ವಾಹ್ನ 11-00 ಘಂಟೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಪ್ರಸನ್ನಕುಮಾರ ಬ್ಲಾಕ್, ಬೆಂಗಳೂರು ನಗರ ವಿಶ್ವವಿದ್ಯಾಲಯ ಆವರಣ, ವೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಂಗಳೂರು - ಈ ಸಭಾಂಗಣದಲ್ಲಿ ನಡೆದ 2021-22ರ ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | ಪದನಾಮ |
|---|---|---|
| 01. | **ಪ್ರೊ. ಬಿ.ಪಿ. ವೀರಭದ್ರಪ್ಪ**<br>ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 02. | **ಶ್ರೀಮತಿ ಉಮಾ. ಕೆ**<br>ಉಪ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ , ಕರ್ನಾಟಕ ಸರ್ಕಾರ,<br>ವಿಧಾನಸೌಧ, ಬೆಂಗಳೂರು | ಸದಸ್ಯರು |
| 03. | **ಶ್ರೀ ಕೆ.ಎಲ್ . ಸುಬ್ರಮಣ್ಯ**<br>ಜಂಟಿ ಕಾರ್ಯದರ್ಶಿಗಳು (ಉನ್ನತ ಶಿಕ್ಷಣ)<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 04. | **ಶ್ರೀ ಗುರುರಾಜ್ ರಾವ್**<br>ನಿರ್ದೇಶಕರು<br>ಯೋಜನಾ ಇಲಾಖೆ<br>ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 05. | **ಶ್ರೀ. ಧರ್ಮಪ್ರಸಾದ್**<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 06. | **ಶ್ರೀಮತಿ. ಅನುರಾಧ.ಜಿ.** ಕೆ.ಎ.ಎಸ್<br>ಕುಲಸಚಿವರು | ಸದಸ್ಯರು. |
| 07. | **ಪ್ರೊ. ಸಿ. ಎಂ. ತ್ಯಾಗರಾಜ್**<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 08. | **ಎಸ್. ರಾಮಕೃಷ್ಣ,** ಕೆ.ಎಸ್.ಎ.ಎಸ್.<br>ಹಣಕಾಸು ಅಧಿಕಾರಿಗಳು | **ಸದಸ್ಯ ಕಾರ್ಯದರ್ಶಿಗಳು** |

**ಪ್ರಸ್ತಾವನೆ:**

ಪ್ರಾರಂಭದಲ್ಲಿ, ಹಣಕಾಸು ಅಧಿಕಾರಿಗಳು ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಗೆ ಆಗಮಿಸಿದ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಆತ್ಮೀಯವಾಗಿ ಸ್ವಾಗತ ಕೋರಿದರು. ನಂತರ ಸಭೆಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸಭಾ ಕಾರ್ಯಸೂಚಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಾಯಿತು.

ಸಭೆಯ ಅಧ್ಯಕ್ಷರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಮುಖ್ಯವಾಗಿ ಹಣಕಾಸು ಅಧಿಕಾರಿಗಳನ್ನು ಹೆಚ್ಚುವರಿಯಾಗಿ ಅನುದಾನವನ್ನು ಸರ್ಕಾರದಿಂದ ವಿಶ್ವವಿದ್ಯಾಲಯಕ್ಕೆ ಪಡೆಯಲು ಕ್ರಮವಹಿಸುವಂತೆ ತಿಳಿಸಿದರು. ಸ್ವೀಕೃತಿ ಮತ್ತು ವೆಚ್ಚಗಳನ್ನು ಯಾವ ರೀತಿ ಮುಂದಿನ ದಿನಗಳಲ್ಲಿ ಸರಿದೂಗಿಸಬಹುದಾಗಿದೆಯೆಂಬ ಬಗ್ಗೆ ಹಣಕಾಸು ಅಧಿಕಾರಿಗಳಿಗೆ ಸಭೆಯ ಸಲಹೆಗಳನ್ನು ಪಡೆಯಲು ಮಾನ್ಯ ಕುಲಪತಿಗಳು ಸೂಚಿಸಿದರು. ಹಣಕಾಸು ಅಧಿಕಾರಿಗಳು ಮಾತನಾಡುತ್ತಾ, ಅತಿಥಿ ಉಪನ್ಯಾಸಕರುಗಳು/ ಸೆಕ್ಯೂರಿಟಿ ಏಜೆನ್ಸಿ/ ಸೇವಾ ನೌಕರರುಗಳ ವೇತನಗಳನ್ನು ಪಾವತಿಸಲು ಕಷ್ಟಸಾಧ್ಯವಾಗಿದೆ. ಅಲ್ಲದೇ ಮುಂದುವರೆದ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿವೆ. ಈ ಹಿನ್ನೆಲೆಯಲ್ಲಿ ಸರ್ಕಾರವು ವಿಶ್ವವಿದ್ಯಾಲಯದಿಂದ ಸಲ್ಲಿಸಿರುವ ಪ್ರಸ್ತಾವನೆಗಳನ್ನು ಪರಿಗಣಿಸಬೇಕೆಂದು ಕೋರಿದರು. ನಂತರ ಸಭಾ ಕಾರ್ಯಸೂಚಿಯಂತೆ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

| | |
|---|---|
| **2021-ಹಸ:2:01:** | **ದಿನಾಂಕ:11-10-2021ರಂದು ನಡೆದ 2021-22ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ.** |
| **ನಿರ್ಣಯ:** | ದಿನಾಂಕ: 11-10-2021ರಂದು ನಡೆದ ಕುವೆಂಪು ವಿಶ್ವವಿದ್ಯಾಲಯದ 2021-22ನೇ ಸಾಲಿನ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ದೃಢೀಕರಿಸಿತು. |
| **2021-ಹಸ:2:02:** | **ದಿನಾಂಕ:11-10-2021ರಂದು ನಡೆದ 2021-22ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.** |
| **ನಿರ್ಣಯ:** | ದಿನಾಂಕ:11-10-2021ರಂದು ನಡೆದ ಕುವೆಂಪು ವಿಶ್ವವಿದ್ಯಾಲಯದ 2021-22ನೇ ಹಣಕಾಸು ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು. |
| **2021-ಹಸ:2:03:** | **2021-22ನೇ ಆರ್ಥಿಕ ವರ್ಷದ ಏಪ್ರಿಲ್-2021ರಿಂದ ಸೆಪ್ಟೆಂಬರ್-2021 ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳ ಅವಲೋಕನ ಹಾಗೂ ಅನುಮೋದನೆ ಕುರಿತು.** |
| **ನಿರ್ಣಯ:** | 2021-22ನೇ ಸಾಲಿನ ಆರ್ಥಿಕ ವರ್ಷದ ವರ್ಷದ ಏಪ್ರಿಲ್-2021ರಿಂದ ಸೆಪ್ಟೆಂಬರ್ 2021 ರವರೆಗಿನ ಸ್ವೀಕೃತಿ ಮತ್ತು ವೆಚ್ಚಗಳನ್ನು ಹಣಕಾಸು ಅಧಿಕಾರಿಗಳು ಸಭೆಯ ಅನುಮೋದನೆಗಾಗಿ ಮಂಡಿಸಿದರು. ನಂತರ ಸಭೆಯು ಕೂಲಂಕಷವಾಗಿ ಪರಿಶೀಲಿಸಿ ಅನುಮೋದಿಸಿತು. |
| **2021-ಹಸ:3:04:** | **ಪರಿನಿಯಮಗಳ ಸ್ಥಾಯಿ ಸಮಿತಿ ಸಭೆ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗೊಂಡ ಕರಡು ಪರಿನಿಯಮಗಳನ್ನು ಹಣಕಾಸು ಸಮಿತಿ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು.** |
| | 1. "DRAFT STATUTES GOVERNING THE UP-GRADATION AND REORGANIZATION OF THE SANCTIONED MINISTERIAL AND GROUP-D POSTS IN THE KUVEMPU UNIVERSITY."<br>2. "DRAFT STATUTES TO SUPPLEMENT PROVISIONS FOR THE PROMOTION OF PROFESSOR (ACADEMIC LEVEL 14) TO SENIOR PROFESSOR (ACADEMIC LEVEL 15) IN THE "STATUTES RELATING TO DIRECT RECRUITMENT AND CAREER ADVANCEMENT SCHEME ANDMISCELLANEOUS PROVISIONS TO IMPLEMENT THE REVISED UGCPAY SCALES TO TEACHERS, LIBRARIAN AND EQUIVALENT CADRE PERSONNEL OF KUVEMPU UNIVERSITY 2020". |

| | |
|---|---|
| | 3. DRAFT STATUTE RELATING TO THE STABLISHMENT OF CENTRE FOR ONLINE EDUCATION (COE).<br>4. DRAFT STATUTE GOVERNING THE ESTABLISHMENT OF MAHAKAVI VALMIKI STUDY CENTRE AT KUVEMPU UNIVERSITY.<br>5. DRAFT STATUTE GOVERNING THE ESTABLISHMENT OF RASHTRA KAVI KUVEMPU STUDY CENTRE AT KUVEMPU UNIVERSITY.<br>6. DRAFT STATUTE GOVERNING THE ESTABLISHMENT OF THE CENTRE FOR GANDHIAN STUDIES AND RESEARCH AT KUVEMPU UNIVERSITY.<br>7. DRAFT STATUTE GOVERNING THE ESTABLISHMENT OF PROFESSOR B. KRISHNAPPA STUDY CHAIR AT KUVEMPU UNIVERSITY.<br>8. DRAFT STATUTE GOVERNING THE ESTABLISHMENT OF ALLAMA PRABHU STUDY CHAIR AT KUVEMPU UNIVERSITY.<br>9. DRAFT STATUTE GOVERNING THE ESTABLISHMENT OF KELADI RAANI CHANNAMMA STUDY CHAIR AT KUVEMPU UNIVERSITY.<br>10. DRAFT STATUTE GOVERNING THE ESTABLISHMENT OF PADMABHUSHAN Dr. RAJKUMAR STUDY CHAIR AT KUVEMPU UNIVERSITY.<br>11. DRAFT STATUTE GOVERNING THE ESTABLISHMENT OF SHARANE AKKA MAHADEVI STUDY CHAIR AT KUVEMPU UNIVERSITY.<br>12. DRAFT STATUTE GOVERNING THE ESTABLISHMENT OF SRIMAD RAMBHAPURI SRI RENUKAACHARYA STUDY CHAIR AT KUVEMPU UNIVERSITY. |
| ನಿರ್ಣಯ: | ಕರಡು ಪರಿನಿಯಮಗಳನ್ನು ಮಾನ್ಯ ಕುಲಸಚಿವರು ಅನುಮೋದನೆಗೆ ಮಂಡಿಸಿದರು.<br><br>"DRAFT STATUTES GOVERNING THE UP-GRADATION AND REORGANIZATION OF THE SANCTIONED MINISTERIAL AND GROUP-D POSTS IN THE KUVEMPU UNIVERSITY." ಇದನ್ನು ಹೊರತುಪಡಿಸಿ ಉಳಿದ ಪರಿನಿಯಮಗಳನ್ನು ಸಭೆಯು ಅನುಮೋದಿಸಿತು.<br><br>ಸರ್ಕಾರದ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರು ಮಾತನಾಡುತ್ತಾ, ಸಿ ಅಂಡ್ ಆರ್ ನಿಯಮಾವಳಿಗಳನ್ನು ನಿಮ್ಮ ವಿಶ್ವವಿದ್ಯಾಲಯವು ರಚಿಸಿಕೊಂಡಿರುವ ಬಗ್ಗೆ ಮಾಹಿತಿಯನ್ನು ಕೇಳಿದರು. ನಂತರ ಮಾನ್ಯ ಕುಲಸಚಿವರು ಮಾಹಿತಿ ನೀಡುತ್ತಾ, ಮೈಸೂರು ವಿಶ್ವವಿದ್ಯಾಲಯದ ಸಿ ಅಂಡ್ ಆರ್ ನಿಯಮಾವಳಿಗಳನ್ನು ವಿಶ್ವವಿದ್ಯಾಲಯವು ಪಾಲಿಸುತ್ತಿರುವುದಾಗಿ ಸಭೆಗೆ ತಿಳಿಸಿದರು. ಯಾವುದೇ ಬಡ್ತಿ ಅಥವಾ ವೇತನ ನಿಗದೀಕರಣವು ಹಣಕಾಸು ಸಮಿತಿಗೆ ಮಂಡಿಸಬೇಕಾಗುತ್ತದೆ. ಪರಿನಿಯಮ ಮಾಡುವ ಮೊದಲು ನಿಮ್ಮಲ್ಲಿ C&R Rules ರಚಿಸಬೇಕಾಗಿರುತ್ತದೆ. ಈಗಾಗಲೇ ಹಲವಾರು ವಿಶ್ವವಿದ್ಯಾಲಯಗಳಲ್ಲಿ ರಚಿಸಿಕೊಂಡಿರುತ್ತಾರೆ. ಕುವೆಂಪು ವಿಶ್ವವಿದ್ಯಾಲಯವು ಈಗಲಾದರೂ C&R Rules ರಚಿಸಬೇಕಾಗಿದೆ ಎಂದು ಹೇಳಿದರು. ನಂತರ ಸರ್ಕಾರದ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರು ಮಾತನಾಡುತ್ತಾ, ನಿಮ್ಮ ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕವಾಗಿ ಸಿ ಅಂಡ್ ಆರ್ |

| | |
|---|---|
| | ನಿಯಮಾವಳಿಗಳನ್ನು ರಚಿಸಿಕೊಂಡು ಹಣಕಾಸು ಸಮಿತಿ ಸಭೆಗೆ ಮಂಡಿಸಲು ಇವರು ತಿಳಿಸಿದರು. ಜಂಟಿ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಇವರು ಮಾತನಾಡಿ ಸೇವಾ ಅನುಭವವುಳ್ಳ ತಜ್ಞರನ್ನು ಅಥವಾ ಜಿಲ್ಲಾಧಿಕಾರಿಗಳ ಕಛೇರಿಯ ಅನುಭವವುಳ್ಳ ನಿವೃತ್ತ ಅಧಿಕಾರಿಯನ್ನು, ಮಾನವ ಸಂಪನ್ಮೂಲ ನಿರ್ವಹಣೆ ಪರಿಣಿತರನ್ನು ಸಮಿತಿಯಲ್ಲಿ ನೇಮಿಸಿಕೊಂಡು ಮುಂದಿನ **ಹದಿನೈದು ದಿನಗಳೊಳಗಾಗಿ ವರದಿಯನ್ನು ಸಲ್ಲಿಸಲು ಸಮಿತಿಗೆ ಸೂಚಿಸಲು** ತಿಳಿಸಿದರು. ಸಿ ಅಂಡ್ ಆರ್ ನಿಯಮಾವಳಿಗಳು ರಚನೆಯಾದ ನಂತರ "DRAFT STATUTES GOVERNING THE UP-GRADATION AND REORGANIZATION OF THE SANCTIONED MINISTERIAL AND GROUP-D POSTS IN THE KUVEMPU UNIVERSITY ಅನ್ನು ಮುಂದಿನ ಹಣಕಾಸು ಸಮಿತಿ ಸಭೆಗೆ ಅನುಮೋದನೆಗಾಗಿ ಮಂಡಿಸಬೇಕೆಂದು ನಿರ್ಣಯಿಸಲಾಯಿತು. |
| 2021–ಹಸ:2:05: | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು :** |
| 1. | **ಶಾಸನಬದ್ಧ ಅಧಿಕಾರಿಗಳ ಉಪಯೋಗಕ್ಕಾಗಿ ಹೊಸ ವಾಹನಗಳ ಖರೀದಿ ಕುರಿತು.** |
| ನಿರ್ಣಯ: | ಶಾಸನಬದ್ಧ ಅಧಿಕಾರಿಗಳಿಗೆ 02 ಹೊಸ ವಾಹನಗಳನ್ನು ಖರೀದಿಸಲು ಮಾನ್ಯ ಕುಲಸಚಿವರು ಸಭೆಯ ಅನುಮತಿ ಕೋರಿದರು. ಸರ್ಕಾರದ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರು ಮಾತನಾಡುತ್ತಾ, ಆಡಿಟ್ ಆಕ್ಷೇಪಣೆ ಆಗುವ ಸಾಧ್ಯತೆಯಿರುವ ಹಿನ್ನಲೆಯಲ್ಲಿ ಎರಡು ಹೊಸ ವಾಹನಗಳನ್ನು ಖರೀದಿಸಲು ಘನ ಸರ್ಕಾರದ ಅನುಮೋದನೆ ಪಡೆದ ನಂತರವೇ ಪ್ರಕ್ರಿಯೆ ಕ್ರಮಕೈಗೊಳ್ಳಲು ತಿಳಿಸಿದರು. ಸರ್ಕಾರದಿಂದ ಅನುಮೋದನೆ ಪಡೆದ ನಂತರ ವಾಹನ ಖರೀದಿ ಮಾಡಲು ತಗಲುವ ವೆಚ್ಚವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸಿಕೊಳ್ಳುವಂತೆ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಇವರು ತಿಳಿಸಿದರು. |
| 2. | **Self Finance Course ಗಳನ್ನು ಆರಂಭಿಸುವ ಕುರಿತು.** |
| ನಿರ್ಣಯ: | ಮಾನ್ಯ ಸಿಂಡಿಕೇಟ್ ಸದಸ್ಯರಾದ ಧರ್ಮಪ್ರಸಾದ ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿ ಉತ್ತಮಗೊಳಿಸುವ ಸಲುವಾಗಿ ಹೆಚ್ಚಿನ ಸಂಖ್ಯೆಯಲ್ಲಿ **Self Finance Course** ಗಳನ್ನು ಆರಂಭಿಸುವಂತೆ ಸಲಹೆ ನೀಡಿದರು. ಉಳಿದ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.<br><br>ಸುಧೀರ್ಘ ಚರ್ಚೆಯ ನಂತರ **Self Finance Course** ಗಳನ್ನು ಆರಂಭಿಸುವ ಕುರಿತಾಗಿ ಸಮಗ್ರವಾಗಿ ಪರಿಶೀಲಿಸಿ ವರದಿಯನ್ನು ನೀಡಲು ವಿಶ್ವವಿದ್ಯಾಲಯದ ಶೈಕ್ಷಣಿಕ ವಿಭಾಗದವತಿಯಿಂದ ತಜ್ಞರ ಸಮಿತಿಯೊಂದನ್ನು ರಚಿಸಲು ನಿರ್ಣಯಿಸಲಾಯಿತು. |
| 3. | **ಸರ್ಕಾರದ ಸಾಫ್ಟ್‌ವೇರ್‌ಗಳನ್ನು ಬಳಸಿಕೊಳ್ಳುವ ಕುರಿತು.** |
| ನಿರ್ಣಯ: | ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯಗಳು ಬಹಳಷ್ಟು ಸಾಫ್ಟ್‌ವೇರ್‌ಗಳನ್ನು ಖಾಸಗಿಯವರಿಂದ ಖರೀದಿಸುತ್ತಿದ್ದು/ ಬಳಸಿಕೊಳ್ಳುತ್ತಿದ್ದು, ಇದರಿಂದ ವಿಶ್ವವಿದ್ಯಾಲಯಗಳಿಗೆ ಆರ್ಥಿಕ ಹೊರೆ ಆಗುತ್ತಿದೆ. ಈ ಹಿನ್ನಲೆಯಲ್ಲಿ ಆರ್ಥಿಕ ಮಿತ ದೃಷ್ಟಿಯಿಂದ ಮಿತವ್ಯಯ ಸಾಧಿಸಲು ಅಗತ್ಯವೆನಿಸುವ ಸಾಫ್ಟ್‌ವೇರ್‌ಗಳನ್ನು ಖಾಸಗಿಯವರಿಂದ ಪಡೆಯದೇ ಸರ್ಕಾರದ ಸಾಫ್ಟ್‌ವೇರ್‌ಗಳನ್ನು ಬಳಸಿಕೊಳ್ಳುವಂತೆ ತಿಳಿಸಿ ಅವರು ಹಾಗೂ ಖಾಸಗಿಯವರಿಗೆ ಪಾವತಿಸುವ ಮೊತ್ತವನ್ನು ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಸಂಶೋಧನಾ ಕಾರ್ಯಕ್ಕೆ ವಿನಿಯೋಗಿಸಿಕೊಳ್ಳಲು ಸಲಹೆ ನೀಡಿದರು. |

| | |
|---|---|
| | ಉಪಕಾರ್ಯದರ್ಶಿಗಳು ಆರ್ಥಿಕ ಇಲಾಖೆ, ಇವರು ಮುಂದುವರೆದು ಮಾತನಾಡುತ್ತಾ, ವಿಶ್ವವಿದ್ಯಾಲಯದ ಹಾಗೂ ಘಟಕ ಕಾಲೇಜುಗಳ ಪ್ರವೇಶ ಪ್ರಕ್ರಿಯೆ, ವಿದ್ಯಾರ್ಥಿಗಳ ಸಮಗ್ರ ಮಾಹಿತಿ ನಿರ್ವಹಣೆಗಾಗಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ Unified University and College Management System (UUCMS) ಸಾಫ್ಟ್‌ವೇರ್‌ನ್ನು ಉಪಯೋಗಿಸಿಕೊಳ್ಳಲು ಕ್ರಮಕೈಗೊಳ್ಳುವಂತೆ ತಿಳಿಸಿದರು. ಹಾಗೂ ಪರೀಕ್ಷಾ ಮತ್ತು ಮೌಲ್ಯಮಾಪನ (UAT) ಬಳಕೆಯನ್ನು ಕೂಡ UUCMS ತಂತ್ರಾಂಶದ ಮೂಲಕ ಮಾಡಿಕೊಳ್ಳಲು ಸೂಚಿಸಿದರು.<br><br>ಸರ್ಕಾರದ ಪ್ರತಿನಿಧಿಗಳು ನೀಡಿದ ಮೇಲ್ಕಂಡ ಸಲಹೆಗಳನ್ನು ಸಭೆಯು ಒಪ್ಪಿತು. ಹಾಗೂ ಇದನ್ನು ಅನುಷ್ಠಾನಗೊಳಿಸಿಕೊಳ್ಳಲು ನಿರ್ಣಯಿಸಲಾಯಿತು. |
| 4. | 2021-22ನೇ ಹಣಕಾಸು ವರ್ಷದ ಆಯ-ವ್ಯಯದ ಪುನರ್ ಧನ ವಿನಿಯೋಗ (ಮರು ಹೊಂದಾಣಿಕೆ) ಮತ್ತು ಪೂರಕ ಅನುದಾನ ಕುರಿತು. |
| ನಿರ್ಣಯ: | 2021-22ನೇ ಹಣಕಾಸು ವರ್ಷದ ಆಯ-ವ್ಯಯದಲ್ಲಿ ಕೊರತೆಯಾಗಿರುವ ಅನುದಾನವನ್ನು <u>ಜ್ಞಾನ ಸಹ್ಯಾದ್ರಿಯ ಶೀರ್ಷಿಕೆ, ಕ್ಯಾಂಪಸ್ ನಿರ್ವಹಣೆ(1 ಎಡಿ5.4) ಶೀರ್ಷಿಕೆಗೆ ಕೈತೋಟ ನಿರ್ಮಾಣ/ ಪಂಪವನ ನಿರ್ವಹಣೆ (1 ಎಡಿ 5.1) ಶೀರ್ಷಿಕೆಯಿಂದ ರೂ. 4.00(ನಾಲ್ಕು ಲಕ್ಷಗಳು ಮಾತ್ರ)</u>ಗಳನ್ನು ಪ್ರಪತ್ರ-22ಎ (ಅನುಚ್ಛೇದ-308, ಕೆ.ಎಫ್.ಸಿ)ರ ಪ್ರಕಾರದಂತೆ ಪುನರ್ ಧನ ವಿನಿಯೋಗ ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು. |

ಅಂತಿಮವಾಗಿ, ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಗಳು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಸಹಿ/- | ಸಹಿ/- |
| (ಎಸ್. ರಾಮಕೃಷ್ಣ, ಕೆ.ಎಸ್.ಎ.ಎಸ್.) | (ಪ್ರೊ. ಬಿ.ಪಿ. ವೀರಭದ್ರಪ್ಪ) |
| ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು | ಕುಲಪತಿಗಳು ಹಾಗೂ ಅಧ್ಯಕ್ಷರು |